

## ರಾಯರಿದ್ದಾರೆ, ಗುರು ರಾಯರಿದ್ದಾರೆ!

### ರಾಯರ ವಿಶೇಷ ಸಂಚಿಕೆ

‘ರಾಯರಿದ್ದಾರೆ, ಗುರು ರಾಯರಿದ್ದಾರೆ!’ (ಆ. 14), ಮಂತ್ರಾಲಯ ಗುರು ರಾಘವೇಂದ್ರ ಸ್ವಾಮಿಗಳ ಆರಾಧನೆಯ ವಿಶೇಷ ಸಂಚಿಕೆ ಅದ್ಭುತವಾಗಿತ್ತು. ಮಂತ್ರಾಲಯ, ಸುತ್ತಮುತ್ತಲ ಸ್ಥಳಗಳ ಮಹತ್ವ ಹಾಗೂ ಕ್ಷೇತ್ರದಲ್ಲಾಗಿರುವ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ಸುಲಲಿತವಾಗಿತ್ತು. ಧೈರ್ಯ ಕಳೆದುಕೊಂಡಾಗ, ಸೋಲುತ್ತಿದ್ದೇವೆ ಎಂದು ಭಯಪಟ್ಟಾಗ, ನಮ್ಮನ್ನು ಗೆಲುವಿನೆಡೆಗೆ ನಡೆಸುವ, ಧೈರ್ಯ ತುಂಬುವ ಏಕೈಕ ಮಾತು, ‘ರಾಯರಿದ್ದಾರೆ’. ಇದು ಸ್ವಂತ ಅನುಭವದ ನುಡಿ.

—ವಿಜಯಕುಮಾರ್ ಹಂಚಿನಾಳ, ಬಾಗಲಕೋಟ

### ಮಾಹಿತಿಪೂರ್ಣ ಲೇಖನ

ಸವಿಸ್ತಾರವಾಗಿ ಮಂತ್ರಾಲಯ ಕ್ಷೇತ್ರದ ಹಿನ್ನೆಲೆ, ಗುರುವರ್ಯರ ಪರಿಚಯ, ನವ ಬೃಂದಾವನದ ಚಿತ್ರಸಹಿತ ವಿವರಣೆ, ಸುತ್ತಮುತ್ತಲಿನ ಆಧ್ಯಾತ್ಮಿಕ ಕ್ಷೇತ್ರಗಳ ಪ್ರಾಮುಖ್ಯತೆ, ಒಟ್ಟಾರೆ ಮಾಹಿತಿಪೂರ್ಣ ಲೇಖನಗಳಿದ್ದವು. ಚಿತ್ರಗಳು ಲೇಖನಕ್ಕೆ ಮತ್ತಷ್ಟು ಮೆರುಗು ತುಂಬಿವೆ.

—ನಾಗರಾಜ ರಾವ್

### ಕುತೂಹಲಕರ ಮಾಹಿತಿ

ಗುರುಗಳ ಕುರಿತ ಕುತೂಹಲಕರ ಮಾಹಿತಿಗಳನ್ನು ನೀಡಿದ ಸಂಚಿಕೆಯಿದು. ಕೊಪ್ಪಳ ಗುರುಗಳ ಸನ್ನಿಧಿಯ ಮಾಹಿತಿ, ಗುರುಗಳ ಸಂಗೀತದ ಪ್ರೀತಿಯ ಜೊತೆಗೆ ಚೆನ್ನುಡಿ, ಹಬ್ಬಗಳ ಮಾಹಿತಿ ಸಂಚಿಕೆಯ ಅಂದವನ್ನು ಹೆಚ್ಚಿಸಿದ್ದವು.

—ರೇಷ್ಮಾ ಗುಳೇದಗುಡ್ಡ

### ಮನಸ್ಸು ಪ್ರಫುಲ್ಲವಾಯಿತು

ಮುಖಪುಟದಲ್ಲಿ ಗುರುರಾಯರ ಕಂಡು ಮನಸ್ಸು ಪ್ರಫುಲ್ಲಗೊಂಡಿತು. ಎಲ್ಲಾ ಭಕ್ತರಿಗೂ ರಾಯರ ಆಶೀರ್ವಾದ ಸದಾಕಾಲವೂ ಇರಲಿ. ಗುರು ರಾಘವೇಂದ್ರರ 354ನೇ ಆರಾಧನಾ ಮಹೋತ್ಸವದ ವಿಶೇಷ ಲೇಖನ ಮಾಹಿತಿ ಚೆನ್ನಾಗಿತ್ತು.

—ಮೇಘನಾ ರಘುನಂದನ್, ಹೂವಿನಹಡಗಲಿ

### ಭಕ್ತಿ ಭಾವದ ಸಂಚಿಕೆ

ರಾಯರಿಗೆ ಸಮರ್ಪಣೆ ಮಾಡಿದ ಸಂಚಿಕೆ ಚೆನ್ನಾಗಿದೆ. ಶ್ರೀನಿವಾಸ ಇನಾಮದಾರ್ ಅವರು ತೆಗೆದಿರುವ ಚಿತ್ರಗಳು ಭಕ್ತಿ ಭಾವಕ್ಕೆ ಉತ್ತೇಜನ ನೀಡುವಂತಿವೆ. ಚಂದ್ರಕಾಂತ ಮಸಾನಿ, ಪ್ರಮೋದ ಕುಲಕರ್ಣಿ ಹಾಗೂ ಗುಂಡೂರ್ ಪವನಕುಮಾರ್, ಉಮಾ ಅನಂತ್ ರಾಯರ ಕುರಿತ ಲೇಖನವನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ.

—ಕೆ.ಎಂ. ಮಧ್ವರಾಯ, ಬೆಂಗಳೂರು

### ರಾಯರ ದರ್ಶನ

ಲೇಖನ ಓದಿ ಖುದ್ದು ರಾಯರ ದರ್ಶನ ಮಾಡಿದಂತಾಯಿತು. ಒಂದು ಬಾರಿ ಮಂತ್ರಾಲಯಕ್ಕೆ ಹೋಗಿದ್ದೆ. ಆದರೆ ಇದರ ಸಂಪೂರ್ಣ ಪರಿಚಯವಾಗಿರಲಿಲ್ಲ. ಲೇಖನದಿಂದ ಮಾಹಿತಿಗಳು ದೊರಕಿದವು.

—ಸಿ.ಕೆ. ಗಣಪ್ಪನವರ ಮುಂಡರಗಿ

### ಪವಿತ್ರ ಹೊತ್ತಿಗೆ

ಚಂದ್ರಕಾಂತ ಮಸಾನಿ, ಪ್ರಮೋದ ಕುಲಕರ್ಣಿ ಅವರ ಲೇಖನಗಳು ಸಂಪೂರ್ಣ ಮಾಹಿತಿ ನೀಡಿವೆ. ಮಧ್ವ ಪರಂಪರೆಯ ಯತಿಗಳಲ್ಲಿ ವಿಶಿಷ್ಟ ಸ್ಥಾನ ಪಡೆದು ಜನಾನುರಾಗಿರುವ ಏಕೈಕ ಯತಿಗಳೆಂದರೆ ರಾಘವೇಂದ್ರ ಸ್ವಾಮಿಗಳು. ಜಾತಿ, ಮತ, ಮಠ, ಬಡವಬಲ್ಲಿದ, ವಿದ್ಯಾವಂತ ಅವಿದ್ಯಾವಂತ ಎಲ್ಲಾ ವರ್ಗದವರನ್ನು ಅನುಗ್ರಹಿಸುವ ಏಕೈಕ ಯತಿಗಳು ‘ರಾಯರು’. ಓದುಗರಿಗೆ ಪವಿತ್ರ ಹೊತ್ತಿಗೆ ಆಯಿತು.

—ಸೇತುರಾವ ಕುಲಕರ್ಣಿ, ಬೆಂಗಳೂರು

### ಹಿರಿಯರ ಬವಣೆಗೆ ಕೈಗನ್ನಡಿ


‘ಕಥೆಯೊಳಗಿನ ಕಥೆ’ (ಆ. 14, ಗೀತಾ ಬಿ.ಯು.) ಕಥೆ ಬಹಳ ಇಷ್ಟವಾಯಿತು. ಓದುತ್ತ ಓದುತ್ತ ಕಣ್ಣಾಲಿಗಳು ಒದ್ದೆಯಾದವು. ‘ದೀರ್ಘಾಯಸ್ಸು ಹಲವರಿಗೆ ಶಾಪ’ ಎಂಬ ನುಡಿ ಹಿರಿಯ ನಾಗರಿಕರ ಬವಣೆಗೆ ಕೈಗನ್ನಡಿ.

—ಸಿ. ಸರಳಾಮಣಿ, ಮೈಸೂರು

### ಆಸಕ್ತಿಕರ ಸಂಭಾಷಣೆ

ಆಸಕ್ತಿಕರವಾಗಿ ಓದಿಸಿಕೊಂಡು ಹೋಗುವ ಕಥೆ. ಸಂಭಾಷಣೆ, ಸ್ವಗತಗಳಲ್ಲೇ ಕಥೆ ಬಿಚ್ಚಿಕೊಳ್ಳುತ್ತಾ ಹೋಗುವ ಪರಿ ಇಷ್ಟವಾಯಿತು. ‘ಬದುಕು ಬೇರೆ, ಬರಹ ಬೇರೆ ಬರಹ ಆಕಾಂಕ್ಷೆ... ಬದುಕು ವಾಸ್ತವ!’ ಈ ಮಾತು ವಿಚಾರ ಮಾಡುವಂತೆ ಮಾಡಿತು. ಸರೋಜ ಪಾತ್ರದ ಜೀವನ ಸಿದ್ಧಾಂತ, ಕಥೆಗೆ ಕಲಶವಿಟ್ಟಂತಿದೆ!

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು



### ಇಂದಿನ ಪೀಳಿಗೆ ಓದಬೇಕಾದ ಕಥೆ

ವಾಸ್ತವದಲ್ಲಿ ನಡೆಯುವ ದಿನ ದಿನದ ಆಗುಹೋಗುಗಳನ್ನು ಪುಟ್ಟ ಕಥೆಯಲ್ಲೇ ಹಿಡಿದಿಟ್ಟಿದ್ದಾರೆ. ಇದು ಈಗಿನ ಪೀಳಿಗೆಗಳಿಗೆ ಬಹಳ ಸಹಜ. ಮನೆ, ಸೊತ್ತು ಬೇಕು, ಆದರೆ ಹೆತ್ತವರ ಕಡೆಗೆ ನಿರ್ಲಕ್ಷ್ಯ. ಹೆತ್ತ ತಾಯಿಯ ನೋವು, ಕಣ್ಣೀರು, ಮೌನ, ಇನ್ನೇನೋ ತಿಳಿಸುತ್ತದೆ. ಓದಿ ಮನಸ್ಸಿಗೆ ತುಂಬಾ ನೋವಾಯಿತು. ಇನ್ನಾದರೂ ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳಬೇಕು.

—ಹೀರಾ ರಮಾನಂದ್

### ಬದುಕಿನ ಕಥೆ-ವ್ಯಥೆ

ಕಥೆ ಬದುಕಿಗೆ ಸಮೀಪವಾಗಿದ್ದು, ಇಂದಿನ ವಯಸ್ಸಾದವರ ಪರಿಸ್ಥಿತಿಗೆ, ಮನಸ್ಥಿತಿಗೆ ಕನ್ನಡಿ ಹಿಡಿದಂತಿದೆ. ಈ ದಿನಮಾನದಲ್ಲಿ ವೃದ್ಧಾಪ್ಯ ಶಾಪವಾಗಿಬಿಟ್ಟಿದೆ.

—ಮುಕ್ತಾ ಸಿ.ಎನ್.

### ಚೆಂದದ ‘ಚೆನ್ನುಡಿ’

‘ಸ್ವರ್ಗ ನಮ್ಮ ದುರ್ಗ’ (ಆ. 07, ಅಶ್ವಿನಿ ಎಸ್.ಟಿ.) ‘ಚೆನ್ನುಡಿ’ ಸೊಗಸಾಗಿದೆ. ಭಾಷೆಯ ಚೆಲುವಿನೊಂದಿಗೆ ದುರ್ಗದ ಹಬ್ಬಗಳ ಆಚರಣೆ, ಪ್ರವಾಸಿತಾಣಗಳು, ಜನರ ಮನೋಭಾವಗಳನ್ನು ಹಿಡಿದಿಟ್ಟ ಲೇಖನ ತುಂಬಾ ಚೆನ್ನಾಗಿದೆ. ಇತಿಹಾಸದಿಂದ ಕಲಿತ ಪಾಠಗಳು ಜನಜೀವನದಲ್ಲಿ ಹಾಸುಹೊಕ್ಕಾಗಿವೆ.

—ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ

### ಜಲಪಾತಗಳ ಸೌಂದರ್ಯ

‘ನೋಡಲು ಬಾರೆ ಈ ಜಲಧಾರೆ’ (ಆ. 07) ಮುಖಪುಟವೇ ಸ್ವಾಗತಿಸಿ ಜಲಪಾತಗಳ ಸೌಂದರ್ಯ ಸವಿಯಲು ಕರೆದೊಯ್ದಿತು. ಬೇಂದ್ರೆಯವರ ‘ಇಳಿದು ಬಾ ತಾಯೇ’ ಕವನ ಗುನುಗುತ್ತ ಗೊಡಚಿನಮಲ್ಕಿ ಇಂದ ಹೊರಟು ಉತ್ತರ ಕನ್ನಡದ ಜಲಪಾತಗಳನ್ನು ವೀಕ್ಷಿಸಿ, ಪಶ್ಚಿಮಘಟ್ಟಗಳ ರಮ್ಯ ಜಲಧಾರೆಗಳಲ್ಲಿ ಮಿಂದು ಹೊಗೇನಕಲ್, ಅಬ್ಬಿ ಫಾಲ್ಸ್, ಭರಚುಕ್ಕಿಗಳಲ್ಲಿ ವಿಹರಿಸಿದ ಅನುಭವ ಆಯಿತು. ಅಲ್ಲೆಲ್ಲ ಭೇಟಿ ನೀಡಿ ವಿಹರಿಸುವ ಆಸೆಯಾಯಿತು.

—ಕಮಲಾರಾವ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in